ಕರೆ ಬಂದಿದೆಯೆಂದು ಮನೆಯವರಿಗೆ ಹೇಳಿ ದೂರದ ಡೆಹರಾಡೂನಿಗೆ ಹಾರಿ ಅಲ್ಲಿನ ಗೆಸ್ಟ್ ಹೌಸಿನ ಮೆತ್ತನೆಯ ಹಾಸಿಗೆಯ ಮೇಲೆ ನಿರುಮ್ಮಳವಾಗಿ ಮೈಚೆಲ್ಲಿದರು.

## 2

ಕೆಂಪೇಗೌಡ ಪ್ರಶಸ್ತಿ ವಿಜೇತ ರುದ್ರಣ್ಣನವರು ಸಹಸ್ರಾರು ಮೈಲು ದೂರದ ಡೆಹ್ರಾಡೂನಿನಲ್ಲಿ ಬಚ್ಚಿಟ್ಟುಕೊಂಡರೂ ಪ್ರಭುದೇವಸ್ವಾಮಿಗಳು ಮಾತ್ರ ತಮ್ಮ ಹಟ ಬಿಡಲೇ ಇಲ್ಲ! ಆವತ್ತು ರಾತ್ರಿಯೇ ಸ್ವಾಮಿಗಳು ರುದ್ರಣ್ಣನವರ ಕನಸಿಗೆ ಬಂದರು. ತಲೆ ಕೆದರಿತ್ತು. ನಿದ್ದೆಗೆಟ್ಟವರಂತೆ ಕಣ್ಣು ಕೆಂಪಾಗಿದ್ದವು. ಪ್ರಭುದೇವಸ್ವಾಮಿಗಳು ಒಂದೊಂದೇ ಹೆಜ್ಜೆಯಿಡುತ್ತಾ... ಹಾಸಿಗೆಯ ಮೇಲೆ ಮೈ ಚೆಲ್ಲಿದ್ದ ರುದ್ರಣ್ಣನವರ ಹತ್ತಿರ ಹತ್ತಿರ ಬಂದೇಬಿಟ್ಟರು. ಇದ್ದಕ್ಕಿದ್ದಂತೆ ಸ್ವಾಮಿಗಳ ಎರಡೂ ಕೈಗಳು ರುದ್ರಣ್ಣನವರ ಕುತ್ತಿಗೆ ಹಿಸುಕತೊಡಗಿದವು. 'ಇನ್ನ ನಿನ್ನ ಹಿಂಗೇ ಬಿಟ್ಟರೆ ನೀನು ಈ ಭೂಮಿಗೆ ಭಾರಾ ಕಣಲೇ ಸೂಳೇಮಗನೆ!' ಎಂದು ಪ್ರಭುದೇವಸ್ವಾಮಿಗಳು ಚೀರಿ ಚೀರಿ ರುದ್ರಣ್ಣನವರ ಕುತ್ತಿಗೆ ಹಿಸುಕತೊಡಗಿದರು.

ರುದ್ರಣ್ಣ ವರಲಿಕೊಳ್ಳುತ್ತಾ ಮೇಲೆದ್ದರು. 'ನಿನ್ನಯ್ಯನ್ ಸ್ವಾಮೀನಾಡ!' ಎಂದು ಗಟ್ಟಿಯಾಗೇ ಕಿರುಚಿದರು. ಹರೆಯದಲ್ಲಿ ಬೆಳಗಾಗೆದ್ದು ಕಿವಿಯ ಮೇಲೆ ಹೂವಿಟ್ಟುಕೊಳ್ಳುವ ಭಕ್ತನಾಗಿದ್ದರೂ, ಮುಂದೆ ಬೆಳೆದಂತೆಲ್ಲ ಒಂಥರದ ಅರೆ ವಿಚಾರವಾದಿಯೂ ಆಗಲು ಪ್ರಯತ್ನಿಸಿದ್ದ ರುದ್ರಣ್ಣ ಇದೀಗ ಪ್ರಭುದೇವಸ್ವಾಮಿಯ ವಿರುದ್ಧ ಬಂಡೇಳಲೇಬೇಕೆಂದು ತೀರ್ಮಾನಿಸಿದರು. ಮೈ ಕೈ ಚಿವುಟಿ ನೋಡಿಕೊಂಡು ತಾವು ಇನ್ನೂ ಬದುಕಿರುವುದನ್ನು ಖಾತ್ರಿ ಮಾಡಿಕೊಂಡ ಮೇಲಂತೂ ಆ ಪ್ರಭುದೇವಸ್ವಾಮಿಯ ಕಾರಣಿಕ ಕೊನೆಗೂ ಸುಳ್ಳಾಯಿತೆಂದು ಗೆಲುವಾದರು. 'ಸತ್ತೋದಂಗೆ ಕನಸು ಬಿದ್ದಷ್ಟೂ ಇನ್ನಾ ಆಯಸ್ಸು ಹೆಚ್ಚುತ್ತೆ...' ಎಂದಿದ್ದ ರಾಮಸ್ವಾಮಿಯ ತಾಯಿಯ ಮಾತನ್ನು ನಂಬುವುದೋ ಬೇಡವೋ ಎಂದುಕೊಳ್ಳುತ್ತಾ ಮೇಲೆದ್ದರೂ, ತಾಯಂದಿರ ಮಾತನ್ನು ನಂಬುವುದೇ ಕ್ಷೇಮ ಎಂದುಕೊಂಡು ಹಗುರಾದರು; ಮರುಗಳಿಗೆಗೇ, ಅರೆ! ಈ ತಾಯಿಯ ಮಾತನ್ನು ನಂಬಿದರೆ ಆ ಪ್ರಭುದೇವಸ್ವಾಮಿಯ ಮಾತನ್ನೂ ನಂಬಬೇಕಾಗುತ್ತದಲ್ಲ... ಎಂದು ಗೊಂದಲಗೊಂಡರು. ಯಾವುದಕ್ಕೂ ಇರಲಿ ಎಂದು ಆರೋಗ್ಯ ಮೇಂಟೇನ್ ಮಾಡಲು ಜಾಗಿಂಗಿಗೆ ಸಿದ್ಧರಾದರು.

ಇನ್ನೂ ನಸುಗತ್ತಲಿರುವಾಗಲೇ ಡೆಹ್ರಾಡೂನಿನ ಬೆಟ್ಟಸಾಲುಗಳಲ್ಲಿ ಜಾಗಿಂಗ್ ಹೊರಟ ರುದ್ರಣ್ಣನವರಿಗೆ ಆ ರಾತ್ರಿಯ ಕನಸಿನ ಇನ್ನೊಂದು ಅರ್ಥ ಹೊಳೆದು ಉತ್ಸಾಹವೆಲ್ಲ ಉಡುಗಿಹೋಯಿತು: 'ಇಲ್ಲ! ಇಲ್ಲ! ಸ್ವಾಮಿಗಳ ಸೂಚನೆಯನ್ನು ಅಷ್ಟು ಸುಲಭವಾಗಿ ತೆಗೆದು ಹಾಕುವಂತಿಲ್ಲ! ಯಾಕೆಂದರೆ ಅವರು ಹಿಂದೆ ಕನಸಿನಲ್ಲಿ ಬಂದು ಹೇಳಿದ್ದರಲ್ಲಿ, ಯಾವಯಾವುದೋ ಸನ್ನೆಗಳ ಮೂಲಕ ಸೂಚಿಸಿದ್ದರಲ್ಲಿ, ತಮ್ಮ ಮನೆಗೆ ಪಾದಪೂಜೆಗೆ ಬಂದಾಗ ಹೇಳಿದ್ದ ಮಾತುಗಳಲ್ಲಿ ಐದಾರು ವಿಷಯಗಳು ನಿಜವಾಗಿವೆ... ಆವತ್ತು ಸ್ವಾಮಿಗಳು, 'ನೀನು ಭಾಳಾ ಎತ್ತರಕ್ಕೆ ಏರುತ್ತೀಯ!' ಅಂದ ಮೇಲೆ ತಾನೇ ಕೊನೆಗೂ ತಾನು ಆಫೀಸಿನ ಚೀಫ್ ಡೈರೆಕ್ಟರ್ ಆಗಿ ರಿಟೈರ್ ಆಗಿದ್ದು... ಆಮೇಲೆ ಕೆಂಪೇಗೌಡ ಪ್ರಶಸ್ತಿ ಬಂದಿದ್ದು... ಎಂದೆಲ್ಲ ಅನ್ನಿಸುತ್ತಿದ್ದಂತೆ... ಛೇ! ಇವೆಲ್ಲ ಯಾರು ಯಾರಿಗೆ ಬೇಕಾದರೂ ಹೇಳಬಹುದಾದ ಸಾಧಾರಣ ಮಾತುಗಳು; ಇವನ್ನೆಲ್ಲ ಹೇಳಲು ಸ್ವಾಮಿಯೇ ಆಗಬೇಕಾದ್ದಿಲ್ಲ ಅನ್ನಿಸಿತು! ಆದ್ದರಿಂದ ಸ್ವಾಮೀಜಿಯ ಮಾತು ಕೊನೇ ಸತ್ಯವೇನಲ್ಲ ಎಂದು ಸಮಾಧಾನ ಹೇಳಿಕೊಂಡು ಸುಮ್ಮನಾದರು. ಆದರೂ ಕನಸಿನಲ್ಲಿ ಕುತ್ತಿಗೆ ಹಿಡಿದ ಸ್ವಾಮೀಜಿಯ ಕೈ ಮತ್ತೆ ಮತ್ತೆ ಕುತ್ತಿಗೆಯ ಬಳಿ ಸುಳಿದಂತಾಗಿ, ''ಇನ್ನ ನಿನ್ನ ಹಿಂಗೇ ಬಿಟ್ಟರೆ ನೀನು ಈ ಭೂಮಿಗೆ ಭಾರಾ ಕಣಲೇ ಸೂಳೇ ಮಗನೆ!'' ಎಂಬುದರ ಅರ್ಥ ಹೊಳೆದು, 'ಇಲ್ಲ! ಇಲ್ಲ! ನಾನು ಇನ್ನು ಮೇಲಾದರೂ